

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 11-01-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಖಲ್ಲಾದ್ ಬಿನ್ ಅಮರ್ ಬಿನ್ ಜಮೂಹ್ ಅನ್‌ಸಾರಿ(ರ) ಸಹಾಬಿಯಾಗಿದ್ದು ಬದರೀ ಸಹಾಬಿಗಳಲ್ಲಿ ಸೇರಿದ್ದರು. ಅವರು ತಮ್ಮ ಪಿತ ಹಝ್ರತ್ ಅಮರ್ ಬಿನ್ ಜಮೂಹ್ ಮತ್ತು ಸಹೋದರರಾದ ಹಝ್ರತ್ ಮುಆಝ್, ಹಝ್ರತ್ ಅಬೂ ಐಮನ್ ಮತ್ತು ಹಝ್ರತ್ ಮಊಝ್ ಜೊತೆಗೆ ಬದರ್ ಯುದ್ಧದಲ್ಲಿ ಭಾಗವಹಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧಕ್ಕೆ ಮದೀನದಿಂದ ಹೊರಟ ನಂತರ ಸುಖ್‌ಯಾ ಎಂಬ ಸ್ಥಳದ ಸಮೀಪ ಶಿಬಿರ ಹೂಡಿದರು. ಹಝ್ರತ್ ಖಲ್ಲಾದ್(ರ) ಹೇಳುತ್ತಾರೆ: ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಸೀಖ ಎಂಬ ಹೆಸರನ್ನು ಸುಖ್‌ಯಾ ಎಂದು ಬದಲಾಯಿಸಿದರು. ಆ ಸ್ಥಳವನ್ನು ಖರೀದಿಸಲು ನಾನು ಯೋಚಿಸಿದ್ದೆ. ಆದರೆ ನನಗಿಂತ ಮೊದಲು ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಅದನ್ನು ಎರಡು ಒಂಟೆಗಳಿಗೆ ಪ್ರತಿಯಾಗಿ ಖರೀದಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಇದರ ಬಗ್ಗೆ ಪ್ರಸ್ತಾಪಿಸಿದಾಗ ಅವರು ಹೇಳಿದರು ಇದು ಬಹಳ ಲಾಭದ ವ್ಯಾಪಾರವಾಗಿದೆ ಎಂದು.

ಹಝ್ರತ್ ಖಲ್ಲಾದ್(ರ), ಅವರ ಪಿತ ಹಝ್ರತ್ ಅಮರ್ ಬಿನ್ ಜಮೂಹ್ ಮತ್ತು ಹಝ್ರತ್ ಅಬೂ ಐಮನ್, ಈ ಮೂವರು ಉಹುದ್ ಯುದ್ಧದಲ್ಲಿ ಸಹ ಭಾಗವಹಿಸಿದ್ದರು ಮತ್ತು ಅದರಲ್ಲೇ ಅವರು ಶಹೀದರಾದರು. ಹಝ್ರತ್ ಖಲ್ಲಾದರ ಪಿತ ಹಝ್ರತ್ ಅಮರ್ ಬಿನ್ ಜಮೂಹ್ ಬಗ್ಗೆ ಹೀಗೆ ವರದಿಯಾಗಿದೆ: ಬದರ್ ಯುದ್ಧದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಕಟಿಸಿದಾಗ ಹಝ್ರತ್ ಅಮರ್‌ರವರ ಕಾಲಿನಲ್ಲಿ ವೈಕಲ್ಯ ಇದ್ದ ಕಾರಣ ಅವರ ಮಕ್ಕಳು ಅವರನ್ನು ಯುದ್ಧದಲ್ಲಿ ಭಾಗವಹಿಸುವುದರಿಂದ ತಡೆದರು. ಆದರೆ ಉಹುದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಅಮರ್ ತನ್ನ ಮಕ್ಕಳೊಂದಿಗೆ ಹೇಳಿದರು: ನೀವು ನನ್ನನ್ನು ಬದರ್ ಯುದ್ಧದಲ್ಲಿ ಭಾಗವಹಿಸಲು ಬಿಡಲಿಲ್ಲ. ಆದರೆ ನಾನು ಉಹುದ್ ಯುದ್ಧದಲ್ಲಿ ಖಂಡಿತವಾಗಿಯೂ ಭಾಗವಹಿಸುವೆನು ಎಂದು ಹೇಳಿದರು. ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ನಿವೇದಿಸಿದರು: ನನ್ನ ಮಕ್ಕಳು ಈಗ ಸಹ ನನ್ನನ್ನು ಜಿಹಾದ್ ಮಾಡುವುದರಿಂದ ತಡೆಯುತ್ತಿದ್ದಾರೆ. ಆದರೆ ನಾನು ತಮ್ಮೊಂದಿಗೆ ಜಿಹಾದ್‌ನಲ್ಲಿ ಭಾಗವಹಿಸಲು ಇಚ್ಛಿಸುತ್ತೇನೆ. ಅಲ್ಲಾಹನಾಣೆ! ನನ್ನ ಹೃದಯದಲ್ಲಿರುವ ಆಶೆಯನ್ನು ಅಲ್ಲಾಹನು ಈಡೇರಿಸಿ ನನಗೆ ಶಹಾದತ್ ನೀಡುವನು ಎಂದು ನಾನು ಭಾವಿಸುತ್ತೇನೆ. ನಾನು ನನ್ನ ಈ ಕುಂಟುಗಾಲಿನೊಂದಿಗೆ ಜನ್ನತ್‌ಗೆ ಪ್ರವೇಶಿಸುವೆನು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಹೇ ಅಮರ್, ನಿಶ್ಶಂಸಯವಾಗಿಯೂ ನಿಮ್ಮ ಅಂಗವಿಕಲತೆ ಅಲ್ಲಾಹನು ಅಂಗೀಕರಿಸಿದ್ದಾನೆ. ಜಿಹಾದ್ ನಿಮಗೆ ಫರ್ಝ್ ಅಲ್ಲ. ಆದರೆ ಅವರ ಮಕ್ಕಳೊಂದಿಗೆ ಹೇಳಿದರು: ನೀವು ನಿಮ್ಮ ಪಿತನನ್ನು ಸತ್ಕರ್ಮದಿಂದ ತಡೆಯಬೇಡಿರಿ. ಅವರ ಮನಸ್ಸಿನ ಆಶೆಯನ್ನು ಈಡೇರಿಸಲು ಅನುಮತಿಸಿರಿ. ಅಲ್ಲಾಹನು ಪ್ರಾಯಶಃ ಅವರಿಗೆ ಶಹಾದತ್ ಪದವಿ ನೀಡಬಹುದು. ಆಗ ಹಝ್ರತ್ ಅಮರ್ ತನ್ನ ಆಯುಧಗಳನ್ನು ಎತ್ತಿಕೊಂಡು ಹೀಗೆ ಪ್ರಾರ್ಥಿಸುತ್ತಾ ಉಹುದ್ ರಣಾಂಗಣದ ಕಡೆಗೆ ಸಾಗಿದರು: **ಅಲ್ಲಾಹುಮ್ಮರ್‌ಝುಖ್‌ನೀ ಶಹಾದತನ್ ವಲಾ ತರುದ್ದುನೀ ಇಲಾ ಅಹ್‌ಲೀ ಖಾಯಿಬನ್** – ಹೇ ಅಲ್ಲಾಹ್ ನನಗೆ ಶಹಾದತ್ ದಯಪಾಲಿಸು. ನನ್ನನ್ನು ನನ್ನ ಮನೆಯ ಕಡೆಗೆ ನಿರಾಶನಾಗಿ ಹೆದರಿ ಮರಳುವಂತೆ ಮಾಡಬೇಡ. ಅಲ್ಲಾಹನು ಅವರ ಪ್ರಾರ್ಥನೆ ಸ್ವೀಕರಿಸಿದನು ಮತ್ತು ಅವರಿಗೆ ಶಹಾದತ್ ಅನುಗ್ರಹಿಸಿದನು.

ಹಝ್ರತ್ ಖಲ್ಲಾದ್‌ರ ತಾಯಿ ಹಝ್ರತ್ ಹಿಂದ್ ಬಿನ್ತ್ ಅಮರ್‌ರವರು ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾರವರ ಪಿತೃಸಹೋದರಿ ಆಗಿದ್ದರು. ಹಝ್ರತ್ ಹಿಂದ್ ತನ್ನ ಪತಿ, ತನ್ನ ಪುತ್ರ, ತನ್ನ ಸಹೋದರರನ್ನು ಅವರ ಶಹಾದತ್ ನಂತರ ಒಂಟೆಯ ಮೇಲೆ ಇರಿಸಿ ಹೊರಟದ್ದರು. ಆದರೆ ಅವರ ಬಗ್ಗೆ ಆಜ್ಞೆ ದೊರೆತಾಗ ಅವರ ಮೃತ ಶರೀರಗಳನ್ನು ಉಹುದ್‌ಗೆ ಮರಳಿಸಲಾಯಿತು. ಅಲ್ಲಿಯೇ ದಫನ್ ಮಾಡಲಾಯಿತು.

(ಈ ಸಂದರ್ಭದ ವಿವರಣೆ ನೀಡುತ್ತಾ ಹುಝೂರ್ ಹೇಳಿದರು): ಹಝ್ರತ್ ಆಯಿಶ(ರ) ಉಹುದ್ ಯುದ್ಧದ ಪರಿಣಾಮಗಳನ್ನು ತಿಳಿಯಲು ಮದೀನದ ಮಹಿಳೆಯರೊಂದಿಗೆ ಮನೆಯಿಂದ ಹೊರಟು ಹಿರ್ರ ಎಂಬಲ್ಲಿಗೆ ತಲುಪಿದಾಗ ಅವರು ಹಿಂದ್ ಬಿನ್ತ್ ಅಮರ್‌ರನ್ನು ದಾರಿಯಲ್ಲಿ ಕಂಡರು. ಹಿಂದ್ ತನ್ನ ಒಂಟೆಯ ಮೇಲೆ ತನ್ನ ಪತಿ ಅಮರ್ ಬಿನ್ ಜಮೂಹ್, ಪುತ್ರ ಹಝ್ರತ್ ಖಲ್ಲಾದ್ ಬಿನ್ ಅಮರ್, ಸಹೋದರ ಹಝ್ರತ್ ಅಬ್ದುಲ್ಲಾ ಬಿನ್ ಅಮರ್‌ರವರ ಮೃತ ಶರೀರಗಳನ್ನು ಇರಿಸಿದ್ದರು. ಹಝ್ರತ್ ಆಯಿಶ(ರ) ವಿಚಾರಿಸಿದರು: ನೀವು ಬಿಟ್ಟು ಬಂದ ಜನರ ಸ್ಥಿತಿ ಹೇಗಿದೆ? ಆಗ ಹಝ್ರತ್ ಹಿಂದ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕ್ಷೇಮದಿಂದಿದ್ದಾರೆ. ಅವರು ಕ್ಷೇಮದಿಂದಿರುವಾಗ ಪ್ರತಿಯೊಂದು ಕಷ್ಟ ಪರಿಹರಿಸಲು ಸುಲಭವಾಗುತ್ತದೆ. ಹಝ್ರತ್ ಆಯಿಶ(ರ) ಕೇಳಿದರು: ಒಂಟೆಯ ಮೇಲೆ ಯಾರದೆಲ್ಲಾ ಮೃತ ಶರೀರಗಳಿವೆ. ಹಿಂದ್

ಹೇಳಿದರು: ನನ್ನ ಸಹೋದರ, ನನ್ನ ಪುತ್ರ ಖಲ್ಲಾದ್, ನನ್ನ ಪತಿ ಅಮರ್ ಬಿನ್ ಜಮೂಹರ ಮೃತ ಶರೀರಗಳಿವೆ. ಹಝ್ರತ್ ಆಯಿಶ ಕೇಳಿದರು: ಎಲ್ಲಿಗೆ ತೆಗೆದುಕೊಂಡು ಹೋಗುತ್ತಿರುವಿರಿ. ಅವರು ಹೇಳಿದರು: ಮದೀನಕ್ಕೆ ದಫನ್ ಮಾಡಲು ಒಯ್ಯುತ್ತಿದ್ದೇನೆ. ಅನಂತರ ಹಿಂದ ಒಂಟೆಯನ್ನು ಮುಂದಕ್ಕೆ ಹೋಗಲು ಹೊಡೆದಾಗ ಅದು ಅಲ್ಲೇ ಕುಳಿತು ಬಿಟ್ಟಿತು. ಆಗ ಆಕೆ ಒಂಟೆಯನ್ನು ಗದರಿಸಿದಾಗ ಅದು ಎದ್ದು ನಿಂತಿತು. ಆದರೆ ಅದರ ಮುಖವನ್ನು ಮದೀನದ ಕಡೆಗೆ ತಿರುಗಿಸಿದಾಗ ಅದು ಪುನಃ ಕುಳಿತುಬಿಟ್ಟಿತು. ನಂತರ ಅವರು ಅದರ ಮುಖವನ್ನು ಉಹುದ್ ಕಡೆಗೆ ತಿರುಗಿಸಿದಾಗ ಒಂಟೆ ಬೇಗ ಬೇಗನೆ ಚಲಿಸಲುತೊಡಗಿತು. ಆಗ ಹಝ್ರತ್ ಹಿಂದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ಈ ವಿಷಯ ತಿಳಿಸಿದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಆ ಒಂಟೆಯನ್ನು ಹಾಗೆ ಮಾಡಲು ನಿಯೋಜಿಸಲಾಗಿದೆ. ಹೇ ಹಿಂದ್, ನಿನ್ನ ಪತಿ ಅಮರ್ ಬಿನ್ ಜಮೂಹ್, ನಿನ್ನ ಪುತ್ರ ಖಲ್ಲಾದ್, ನಿನ್ನ ಸಹೋದರ ಅಬ್ದುಲ್ಲಾ ಸ್ವರ್ಗದಲ್ಲಿ ಪರಸ್ಪರ ಸ್ನೇಹಿತರಾಗಿದ್ದಾರೆ. ಆಗ ಹಿಂದ್ ಹೇಳಿದರು: ಯಾ ರಸೂಲುಲ್ಲಾಹ್, ನನಗೋಸ್ಕರ ಸಹ ಪ್ರಾರ್ಥಿಸಿರಿ. ಅಲ್ಲಾಹನು ನಾನು ಸಹ ಅವರೊಂದಿಗೆ ಇರುವಂತೆ ಮಾಡಲಿ.

ನಾನು ಇಂದು ಪ್ರಸ್ತಾಪಿಸುವ ಎರಡನೆಯ ಸಹಾಬಿ ಹಝ್ರತ್ ಅಖಬ ಬಿನ್ ಆಮಿರ್(ರ). ಅವರ ತಾಯಿ ಫಖೀಹ ಬಿನ್ತ್ ಸಕನ್. ಅವರ ಪಿತ ಆಮಿರ್ ಬಿನ್ ನಾಬಿ ಆಗಿದ್ದರು. ಹಝ್ರತ್ ಅಖಬ ಬಿನ್ ಆಮಿರ್ ಎಲ್ಲರಿಗಿಂತ ಮೊದಲು ಮಕ್ಕಕ್ಕೆ ಹೋಗಿ ಮುಸ್ಲಿಮರಾದ ಆರು ಅನ್‌ಸಾರಿಗಳಲ್ಲಿ ಒಬ್ಬರಾಗಿದ್ದರು. ಅವರು ಬೈಅತ್ ಅಖಬ ಊಲಾದಲ್ಲಿ ಭಾಗವಹಿಸಿದ್ದರು. ಮೇಲೆ ಹೇಳಿದ ಆರು ಜನರ ಹೆಸರುಗಳು ಹೀಗಿವೆ: ಅಬೂ ಉಮಾಮ ಅಸದ್ ಬಿನ್ ಝುರಾರ, ಇವರು ಬನೂ ನಜ್ಜಾರ್ ಗೋತ್ರದವರಾಗಿದ್ದರು. ಅವರು ಅಂಗೀಕರಿಸುವುದರಲ್ಲಿ ಎಲ್ಲರಿಗಿಂತಲೂ ಮೊದಲಿಗರಾಗಿದ್ದರು. ಔಫ್ ಬಿನ್ ಹಾರಿಸ್, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಜ್ಜ ಅಬ್ದುಲ್ ಮುತ್ತಲಿಬರ ಅಜ್ಜಿಯವರ ಗೋತ್ರಕ್ಕೆ ಸೇರಿದ್ದರು. ರಾಫಿಅ್ ಬಿನ್ ಮಾಲಿಕ್ ಬನೂ ಝುರೀಖ್ ಗೋತ್ರದವರಾಗಿದ್ದರು. ಅಷ್ಟರವರೆಗೆ ಅವತೀರ್ಣವಾದ ಪವಿತ್ರ ಖುರ್‌ಆನ್ ಅವರಿಗೆ ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದರು. ಖುತಬ ಬಿನ್ ಆಮಿರ್ ಬನೀ ಸಲ್ಮಾ ಗೋತ್ರದವರು. ಅಖಬ ಬಿನ್ ಆಮಿರ್ ಬನೀ ಹರಾಮ್ ಗೋತ್ರದವರು. ಜಾಬಿರ್ ಬಿನ್ ಅಬ್ದುಲ್ಲಾ ಬಿನ್ ರಿಯಾಬ್ ಬನೀ ಉಬೈದ್ ಗೋತ್ರದವರಾಗಿದ್ದರು. ಈ ಆರು ಜನರು ಬೈಅತ್ ಮಾಡಿದ ನಂತರ ಮದೀನಕ್ಕೆ ಹೊರಡುವಾಗ ಹೇಳಿದರು: ನಮ್ಮೊಳಗಿನ ಅಂತರ್ ಕಲಹಗಳು ನಮ್ಮನ್ನು ಬಹಳ ಬಲಹೀನರನ್ನಾಗಿ ಮಾಡಿದೆ. ನಮ್ಮಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳಿವೆ. ನಾವು ಯಸ್‌ರಿಬ್‌ಗೆ ಹೋಗಿ ನಮ್ಮ ಸಹೋದರರಿಗೆ ಇಸ್ಲಾಮ್ ಪ್ರಚಾರ ಮಾಡುವೆವು. ಅಲ್ಲಾಹನು ನಿಮ್ಮ ಮೂಲಕ ನಮ್ಮನ್ನು ಒಗ್ಗೂಡಿಸುವುದು ಅದ್ಭುತಕರವೇನಲ್ಲ. ಅನಂತರ ನಾವು ಪ್ರತಿಯೊಂದು ರೀತಿಯಲ್ಲೂ ತಮಗೆ ನೆರವು ನೀಡುವೆವು. ಹಾಗೆ ಅವರು ಯಸ್‌ರಿಬ್‌ಗೆ ಮರಳಿದರು. ಆ ಜನರ ಮೂಲಕ ಯಸ್‌ರಿಬ್‌ನಲ್ಲಿ ಇಸ್ಲಾಮ್ ಬಗ್ಗೆ ಚರ್ಚೆ ಪ್ರಾರಂಭವಾಯಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ವರ್ಷವನ್ನು ಮಕ್ಕಕ್ಕೆ ಯಸ್‌ರಿಬ್‌ನವರು ಆಗಮಿಸಿದ ಕಾರಣ ಭಯ ಮತ್ತು ಪ್ರತೀಕ್ಷೆಯ ಸ್ಥಿತಿಯಲ್ಲಿ ಕಳೆದರು. ಅವರ ಆಗಮನದಿಂದ ಯಾವ ಪರಿಣಾಮ ಉಂಟಾಗುವುದು, ಯಸ್‌ರಿಬ್‌ನಲ್ಲಿ ಜಯಗಳಿಸುವ ಸಾಧ್ಯತೆ ಇದೆಯೇ ಎಂದು ಅವರು ಯೋಚಿಸುತ್ತಿದ್ದರು.

ಆ ಸಮಯದಲ್ಲಿ ಮಕ್ಕದವರ ದೌರ್ಜನ್ಯ ದಿನಗಳೆದಂತೆ ವರ್ಧಿಸುತ್ತಾ ಇತ್ತು. ಇಸ್ಲಾಮನ್ನು ಅಳಿಸಿ ಬಿಡಲು ಇದು ಅನುಯೋಜ್ಯ ಕಾಲವೆಂದು ಅವರು ಭಾವಿಸುತ್ತಿದ್ದರು. ಅಂತಹ ಸೂಕ್ಷ್ಮ ಪರಿಸ್ಥಿತಿಯಲ್ಲೂ – ಅದಕ್ಕಿಂತ ಹೆಚ್ಚಿನ ಸೂಕ್ಷ್ಮ ಪರಿಸ್ಥಿತಿ ಇಸ್ಲಾಮ್‌ಗೆ ಎಂದೂ ಸಂಭವಿಸಿರಲಿಲ್ಲ – ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಅವರ ಸಹಾಬರು ಒಂದು ಬಲಿಷ್ಠ ಬಂಡೆ ಕಲ್ಲಿನ ಹಾಗೆ ತಮ್ಮ ನಿಲುವಲ್ಲಿ ಸ್ಥಿರವಾಗಿದ್ದರು. ಅವರ ದೃಢ ನಿರ್ಧಾರ ಮತ್ತು ಸ್ಥಿರತೆ ಕೆಲವು ಸಂದರ್ಭಗಳಲ್ಲಿ ಅವರ ಶತ್ರುಗಳನ್ನು ಸಹ ಆಶ್ಚರ್ಯಗೊಳಿಸುತ್ತಿದ್ದವು. ಈ ಮನುಷ್ಯ ಎಂತಹ ದೃಢ ಹೃದಯ ಹೊಂದಿದವನಾಗಿದ್ದಾನೆ. ಯಾವುದೇ ವಸ್ತು ಅವನನ್ನು ತನ್ನ ಸ್ಥಾನದಿಂದ ದೂರ ಸರಿಸಲಾರದು ಎಂದು ಅವರು ಯೋಚಿಸುತ್ತಿದ್ದರು.

ಆ ಕಾಲದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಡಿಗಳಲ್ಲಿ ವಿಶಿಷ್ಟವಾದ ಗಂಭೀರತೆ ಮತ್ತು ಪರಿಕ್ರಮ ಕಾಣುತ್ತಿತ್ತು. ಅವರು ಮಾತನಾಡುತ್ತಿದ್ದಾಗ ಅವರ ಮಾತಿನಿಂದ ಶತ್ರುಗಳಲ್ಲಿ ಭಯ ಹುಟ್ಟುತ್ತಿತ್ತು. ಕಷ್ಟಗಳ ಭಯಾನಕ ತೂಫಾನುಗಳಲ್ಲಿ ಅವರ ಶಿರ ಯಾವಾಗಲೂ ಇನ್ನಷ್ಟು ಎತ್ತರವಾಗಿ ಕಾಣುತ್ತಿತ್ತು. ಈ ದೃಶ್ಯ ಒಂದು ಕಡೆ ಮಕ್ಕದ ಖುರೈಶರನ್ನು ಗಾಬರಿಗೊಳಿಸುತ್ತಿತ್ತು. ಅವರ ಹೃದಯಗಳಲ್ಲಿ ಕೆಲವು ಸಾರಿ ಭಯಭೀತಿ ಉಂಟಾಗುತ್ತಿತ್ತು. ಈ ಕಾಲದ ಬಗ್ಗೆ ಸರ್ ವಿಲಿಯಂ ಮ್ಯೂರ್ ಹೀಗೆ ಹೇಳುತ್ತಾರೆ: ‘ಆ ಕಾಲದಲ್ಲಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತನ್ನ ಜನಾಂಗದವರ ಮುಂದೆ ಹೇಗೆ ಎದೆ ಸೆಟೆದು ನಿಲ್ಲುತ್ತಿದ್ದರೆಂದರೆ ಆ ಜನರು ಕೆಲವು ಸಾರಿ ಏನೂ ಮಾಡಲು ತಿಳಿಯದೆ ತಬ್ಬಿಬ್ಬಾಗುತ್ತಿದ್ದರು. ತಮ್ಮ ವಿಜಯದ ಬಗ್ಗೆ ದೃಢ ನಿಶ್ಚಯ ಹೊಂದಿದ ಆದರೆ ಬಾಹ್ಯವಾಗಿ ಬಲಹೀನರೂ ನಿಸ್ಸಹಾಯಕರೂ ಆಗಿದ್ದ ಚಿಕ್ಕ ಗುಂಪು ಒಂದು ಸಿಂಹದ ಬಾಯಿಯೊಳಗಿದ್ದಂತೆ ಇದ್ದರು. ಆದರೆ ಅವರು ಸಂದೇಶವಾಹಕರನ್ನು ಕಳುಹಿಸಿದ ಅಲ್ಲಾಹನ ವಾಗ್ದಾನಗಳ ಬಗ್ಗೆ ಪರಿಪೂರ್ಣ ದೃಢ ವಿಶ್ವಾಸ ಹೊಂದಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಂತಹ ದೃಢ ನಿಶ್ಚಯದೊಂದಿಗೆ ನಿಂತಿದ್ದರೆಂದರೆ ಯಾವುದೇ ವಸ್ತು ಅವರನ್ನು ಆ ಸ್ಥಳದಿಂದ ಅಲುಗಾಡಿಸಲು ಸಾಧ್ಯವಿರಲಿಲ್ಲ.’

ಆ ಕಾಲ ಇಸ್ಲಾಮ್‌ಗೆ ಬಹಳ ವಿಷಮತೆಯ ಕಾಲವಾಗಿತ್ತು. ಮಕ್ಕದವರ ಬಗ್ಗೆ ಪರಿಪೂರ್ಣವಾಗಿ ನಿರಾಶೆ ತಲೆದೋರಿತ್ತು. ಆದರೆ ಮದೀನದಲ್ಲಿ ಪ್ರತೀಕ್ಷೆಯ ಕಿರಣಗಳು ಕಾಣಿಸುತ್ತಿದ್ದುವು. ಬೈಅತ್ ಮಾಡಿ ಹೋದ ಜನರ ಕಾರಣದಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದ ಕಡೆಗೆ ಬಹಳ ಶ್ರದ್ಧೆಯಿಂದ ದೃಷ್ಟಿ ಇರಿಸಿದ್ದರು. ಮದೀನ ಸಹ ಮಕ್ಕ ಮತ್ತು ತಾಯಿಫ್ ಹಾಗೆ ತನ್ನನ್ನು ತಿರಸ್ಕರಿಸುವುದೋ ಅಥವಾ ಅದರ ಅದೃಷ್ಟ ಬೇರೆ ರೀತಿಯಲ್ಲಿದೆಯೋ ಎಂದು ಯೋಚಿಸುತ್ತಿದ್ದರು. ಹಾಗೆ ಹಜ್ ಕಾಲ ಸಮೀಪಿಸಿತು. ಅವರು ತಮ್ಮ ಮನೆಯಿಂದ ಹೊರಟು ಮಿನಾದ ದಾರಿಯಲ್ಲಿರುವ ಅಖಬಕ್ಕೆ ತಲಪಿ ಅತ್ತಿತ್ತ ದೃಷ್ಟಿಸಿದರು. ಅವರ ದೃಷ್ಟಿ ಯಸ್‌ರಿಬ್‌ನವರ ಒಂದು ಚಿಕ್ಕ ಗುಂಪಿನ ಕಡೆಗೆ ಹರಿಯಿತು. ಆ ಜನರು ಅವರನ್ನು ನೋಡಿ ತಕ್ಷಣ ಗುರುತಿಸಿದರು. ಅವರು ಅತ್ಯಂತ ಪ್ರೀತಿ ಮತ್ತು ನಿಷ್ಠೆಯಿಂದ ಮುಂದೆ ಬಂದು ಅವರನ್ನು ಭೇಟಿಯಾದರು. ಆಗ ಆ ಗುಂಪಿನಲ್ಲಿ ಹನ್ನೆರಡು ಜನರಿದ್ದರು. ಅವರಲ್ಲಿ ಐವರು ಹಿಂದಿನ ವರ್ಷ ಬೈಅತ್ ಮಾಡಿದವರೂ ಏಳು ಜನರು ಹೊಸಬರೂ ಔಸ್ ಮತ್ತು ಖದ್‌ರಜ್ ಖಬೀಲದವರೂ ಆಗಿದ್ದರು. ಹಝ್ರತ್ ಅಖಬ ಬಿನ್ ಆಮಿರ್ ಈ ಬೈಅತ್‌ನಲ್ಲಿ ಸೇರಿದ್ದರು.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜನರಿಂದ ದೂರವಿರುವ ಒಂದು ಕಣಿವೆ ಪ್ರದೇಶದಲ್ಲಿ ಅವರನ್ನು ಕಂಡಿದ್ದರು. ಅವರು ಯಸ್‌ರಿಬ್ ಬಗ್ಗೆ ಸಮಾಚಾರ ನೀಡಿದರು. ಈ ಸಾರಿ ಕ್ರಮಬದ್ಧವಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೈಗೆ ಕೈಯಿಟ್ಟು ಬೈಅತ್ ಮಾಡಿದರು. ಈ ಬೈಅತ್ ಮದೀನದಲ್ಲಿ ಇಸ್ಲಾಮ್ ಸ್ಥಾಪನೆಗೆ ಅಸ್ತಿಭಾರದ ಕಲ್ಲಾಯಿತು. ಬೈಅತ್ ನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಸತ್ಯದಿಂದಲೂ ಸ್ಥಿರತೆಯಿಂದಲೂ ಬೈಅತ್ ಪ್ರತಿಜ್ಞೆಯನ್ನು ಸ್ಥಿರವಾಗಿ ಅನುಸರಿಸುವುದಾದರೆ ನಿಮಗೆ ಜನ್ನತ್ ಸಿಗುವುದು. ಆದರೆ ನೀವು ಬಲಹೀನತೆ ತೋರಿಸಿದರೆ ನಿಮ್ಮ ವಿಷಯ ಅಲ್ಲಾಹನ ಕೈಗಳಲ್ಲಿರುವುದು. ಅವನು ತನಗಿಷ್ಟ ಬಂದಂತೆ ವರ್ತಿಸುವನು.

ಈ ಬೈಅತ್ ಚರಿತ್ರೆಯಲ್ಲಿ **ಬೈಅತೆ ಅಖಬ ಊಲಾ** ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿದೆ. ಏಕೆಂದರೆ ಈ ಬೈಅತ್ ಪಡೆದ ಸ್ಥಳದ ಹೆಸರು ಅಖಬ ಎಂದಾಗಿದೆ. ಅದು ಮಕ್ಕ ಮತ್ತು ಮಿನಾದ ಮಧ್ಯೆ ಇರುವ ಸ್ಥಳವಾಗಿದೆ. ಅಖಬದ ಶಬ್ದಾರ್ಥ ಉನ್ನತ ಪರ್ವತದ ಮಾರ್ಗ ಎಂದು. ಮಕ್ಕದಿಂದ ಮದೀನಕ್ಕೆ ಮರಳುವ ಮೊದಲು ಆ ಹನ್ನೆರಡು ನವ ಮುಸ್ಲಿಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅಪೇಕ್ಷಿಸಿದರು: ನಮ್ಮ ಜೊತೆಗೆ ಒಬ್ಬ ಇಸ್ಲಾಮೀ ಅಧ್ಯಾಪಕನನ್ನು ಕಳುಹಿಸಿರಿ. ಅವರು ನಮಗೆ ಇಸ್ಲಾಮಿನ ಉಪದೇಶಗಳನ್ನು ಕಲಿಸಲಿ ಮತ್ತು ನಮ್ಮ ಬಹುದೇವಾರಾಧಕ ಸಹೋದರರಿಗೆ ಇಸ್ಲಾಮಿನ ತಬ್ಲೀಗ್ ಮಾಡಲಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್‌ಯಿಬ್ ಬಿನ್ ಉಮೈರ್ ಎಂಬ ಅಬ್ದುದ್ದಾರ್ ಗೋತ್ರದ ಅತ್ಯಂತ ನಿಷ್ಠಾವಂತ ತರುಣನನ್ನು ಅವರ ಜೊತೆಗೆ ಕಳುಹಿಸಿದರು.

ನಂತರ ನಬವಿ ವರ್ಷ 13ರಲ್ಲಿ ಬೈಅತೆ ಅಖಬ ಸಾನಿಯ ಸಂಭವಿಸಿತು. ಅದರಲ್ಲಿ ಎಪ್ಪತ್ತು ಅನ್‌ಸಾರ್‌ಗಳು ಬೈಅತ್ ಮಾಡಿದರು.

ಹಝ್ರತ್ ಅಖಬ ಬಿನ್ ಆಮಿರ್ ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿ ಭಾಗವಹಿಸಿದರು. ಉಹುದ್ ಯುದ್ಧದಲ್ಲಿ ಅವರು ಹಸಿರು ಬಣ್ಣದ ಪೋಷಾಕಿನಿಂದ ಗುರುತಿಸಲ್ಪಡುತ್ತಿದ್ದರು. ಅವರು ಹಝ್ರತ್ ಅಬೂಬಕರ್(ರ) ರವರ ಖಿಲಾಫತ್ ಕಾಲದಲ್ಲಿ ಹಿಜರಿ 12ರಲ್ಲಿ ಯಮಾಮ ಯುದ್ಧದಲ್ಲಿ ಶಹೀದರಾದರು. ಹಝ್ರತ್ ಅಖಬ ಬಿನ್ ಆಮಿರ್ ಹೇಳುತ್ತಾರೆ: ನನ್ನ ಪುತ್ರ ಒಂಬತ್ತು ವರ್ಷ ಪ್ರಾಯದವನಾಗಿದ್ದಾಗ ನಾನು ಅವನನ್ನು ಕರೆದುಕೊಂಡು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ, ತಾವು ನನ್ನ ಮಗನಿಗೆ ಪ್ರಾರ್ಥನೆ ಕಲಿಸಿರಿ. ಅವನು ಆ ಪದಗಳನ್ನು ಬಳಸಿ ದುಆ ಮಾಡಲಿ ಎಂದು ಹೇಳಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಬಾಲಕನೊಂದಿಗೆ ಹೇಳಿದರು: ಹೀಗೆ ದುಆ ಮಾಡು, **ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಸಿಹ್ಹತ ಫೀ ಈಮಾನಿನ್ ವ ಈಮಾನಿನ್ ಫೀ ಹುಸ್‌ನಿ ಖುಲುಖಿನ್ ವ ಸಲಾಹನ್ ಯತ್‌ಬಉಹು ನಜಾತ್**. ಓ ಅಲ್ಲಾಹ್ ನಾನು ನಿನ್ನೊಂದಿಗೆ ವಿಶ್ವಾಸಕ್ಕೆ ಸಂಬಂಧಿಸಿ ಆರೋಗ್ಯ ಸ್ಥಿತಿಯನ್ನು ಬೇಡಿಕೊಳ್ಳುತ್ತೇನೆ. ಸತ್ಯವಿಶ್ವಾಸದೊಂದಿಗೆ ಸದ್ಗುಣಗಳನ್ನು ಹೊಂದುವ ಬಗ್ಗೆ ಪ್ರಾರ್ಥಿಸುತ್ತೇನೆ. ಸುಧಾರಣೆಯ ನಂತರ ಜಯವನ್ನು ಬೇಡಿಕೊಳ್ಳುತ್ತೇನೆ.

ಅಲ್ಲಾಹನು ಈ ಸಹಾಬರ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ – ಆಮೀನ್.

ಇನ್ನು ನಾನು ಅಮೇರಿಕದ ಒಬ್ಬ ಬಹಳ ಹಳೆಯ ಅಹ್ಮದಿಯ ಬಗ್ಗೆ ಪ್ರಸ್ತಾಪಿಸುವೆನು. ಮತ್ತು ಅವರ ಜನಾಝ ನಮಾಝ್ ಸಹ ನಿರ್ವಹಿಸುವೆನು. ಅವರ ಹೆಸರು ಸಿಸ್ಟರ್ ಆಲಿಯಾ ಶಹೀದ್ ಸಾಹಿಬ. ಅವರು ದಿವಂಗತ ಅಹ್ಮದ್ ಶಹೀದ್ ಸಾಹಿಬರ ಪತ್ನಿಯಾಗಿದ್ದರು. ಡಿಸೆಂಬರ್ 26ರಂದು ಅವರು ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರಿಗೆ ದೀರ್ಘಾಯುಸ್ಸಿನ ಭಾಗ್ಯ ಲಭಿಸಿತ್ತು. ಅವರಿಗೆ ಕೆಲಸ ಮಾಡುವ ಭಾಗ್ಯ ಸಹ ಲಭಿಸಿತ್ತು. ಅವರು ಯಾವುದೇ ಅಂಗ ವೈಕಲ್ಯ ಹೊಂದದೆ ರಕ್ಷಿಸಲ್ಪಟ್ಟರು. 105 ವರ್ಷ ಅವರ ಪ್ರಾಯವಾಗಿತ್ತು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ.

ಅಮೇರಿಕದ ಅಮೀರ್ ಸಾಹಿಬರು ಬರೆಯುತ್ತಾರೆ: ಅವರು 1936ರಲ್ಲಿ ಬೈಅತ್ ಮಾಡುವ ಭಾಗ್ಯ ಗಳಿಸಿದರು. ಅವರು 1963 ರಿಂದ 1966 ತನಕ ಅಮೇರಿಕದ ಸದರ್ ಲಜ್‌ನ ಇಮಾಯಿಲ್ಲಾಹ್ ಆಗಿದ್ದರು. ಅವರು ಅಂದಾಜು ಐವತ್ತು ವರ್ಷಗಳ ಕಾಲ ಅಮೇರಿಕದ ಲಜ್‌ನದ ಜನರಲ್ ಸೆಕ್ರೆಟರಿ, ಸೆಕ್ರೆಟರಿ ಮಾಲ್, ಸೆಕ್ರೆಟರಿ ತಅ್‌ಲೀಮ್, ಸೆಕ್ರೆಟರಿ ಖಿದ್‌ಮತೆ ಖಲ್‌ಖ್ ಮತ್ತು ಪ್ರಾದೇಶಿಕ ಜಮಾಅತಿನ ಸದರ್ ಹುದ್ದೆಗಳಲ್ಲಿ ಅಮೇರಿಕ ಲಜ್‌ನಕ್ಕೆ ಸೇವೆ

ಸಲ್ಲಿಸಿದ್ದರು. ಅವರಿಗೆ ಯಾವಾಗಲೂ ಜಮಾಅತ್ ಮತ್ತು ಖಿಲಾಫತ್‌ನೊಂದಿಗೆ ಗಾಢವಾದ ಸಂಬಂಧವಿತ್ತು. ಅವರು ಪ್ರತಿಯೊಂದು ರೀತಿಯ ತ್ಯಾಗ ಮಾಡಲು ಪ್ರತಿ ಸಮಯ ಸಿದ್ಧರಾಗಿದ್ದರು. ಅವರು ಬಹಳ ಪ್ರೀತಿ ವಾತ್ಸಲ್ಯಗಳನ್ನು ತೋರಿಸುವವರಾಗಿದ್ದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಸಂತಾನಗಳಲ್ಲಿಯೂ ಧಾರ್ಮಿಕ ಸೇವೆ ಮಾಡುವ ಆತ್ಮ ಮತ್ತು ಉತ್ಸಾಹ ಅವರಲ್ಲಿದ್ದಂತೆಯೇ ಹುಟ್ಟುವಂತಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis(atba)***

*At,Masjid Baithul Futhuh London, UK. On 11-01-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon